159ಎಲ್ಎ
95

# ಕರ್ನಾಟಕ ವಿಧಾನ ಪರಿಷತ್ತು

ಗಮನ ಸೆಳೆಯುವ ಸೂಚನೆ (ನಿಯಮ 72)
ಮಾನ್ಯ ಸದಸ್ಯರ ಹೆಸರು: ಶ್ರೀ ಸಿ ಟಿ ರವಿ
ಉತ್ತರಿಸುವ ದಿನಾಂಕ:20.08.2026

ಸೂಚನೆ:

ರಾಜ್ಯಾದ್ಯಂತ ವೃದ್ಧಾಪ್ಯ, ವಿಧವಾ, ಸಂಧ್ಯಾ ಸುರಕ್ಷಾ ಹಾಗೂ ವಿಕಲಚೇತನರ ಪಿಂಚಣಿ ಯೋಜನೆಗಳಡಿ ಸೌಲಭ್ಯ ಪಡೆಯುತ್ತಿದ್ದ 16 ರಿಂದ 18 ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಕಳೆದ 3 ತಿಂಗಳಿಂದ ಪಿಂಚಣಿ ತಡೆಹಿಡಿಯಲಾಗಿದೆ. ಯಾವುದೇ ಪೂರ್ವ ಮಾಹಿತಿ ಇಲ್ಲದಿರುವುದು, ಪಿಂಚಣಿ ಏತಕ್ಕಾಗಿ ಸ್ಥಗಿತಗೊಂಡಿದೆ ಎಂಬ ಸ್ಪಷ್ಟ ಮಾಹಿತಿಯಾಗಲಿ ಅಥವಾ ನೋಟೀಸ್ ಆಗಲಿ ಶೇ.50 ಕ್ಕಿಂತ ಹೆಚ್ಚು ಫಲಾನುಭವಿಗಳಿಗೆ ತಲುಪಿಲ್ಲ. ಇದರಿಂದ ಬಡ ವೃದ್ಧರು ಹಾಗೂ ಅಂಗವಿಕಲರು ಕಚೇರಿಗಳಿಂದ ಕಚೇರಿಗಳಿಗೆ ಅಲೆಯುವಂತಾಗಿದೆ.

ಪರಿಶೀಲನೆ ಹಾಗೂ ತಾಂತ್ರಿಕ ಕಾರಣಗಳನ್ನು ನೀಡಿ ಪಿಂಚಣಿ ತಡೆಯಲಾಗಿದ್ದು ಇದರಿಂದ ಸರ್ಕಾರಕ್ಕೆ ತಿಂಗಳಿಗೆ ಸುಮಾರು 150 ಕೋಟಿ ರೂ. ಉಳಿತಾಯವಾಗುತ್ತಿದೆ. ಆದರೆ, ಜೀವನೋಪಾಯಕ್ಕೆ ಇದನ್ನೇ ನಂಬಿದ್ದ ಬಡಜನರ ಬದುಕು ದುಸ್ತರವಾಗಿದೆ. ಭೌತಿಕ ಪರಿಶೀಲನೆ. ಆದಾಯ ಪ್ರಮಾಣ ಪತ್ರ ಹಾಗೂ ವಿಳಾಸ ಬದಲಾವಣೆ ನೆಪದಲ್ಲಿ ಸೂಕ್ತ ಕಾಲಾವಕಾಶ ನೀಡದೆ ಲಕ್ಷಾಂತರ ಜನರ ಹೆಸರನ್ನು ಪಟ್ಟಿಯಿಂದ ಕೈಬಿಡಲಾಗಿದೆ.

ಅರ್ಹ ಫಲಾನುಭವಿಗಳಿಗೆ ತಕ್ಷಣವೇ ಬಾಕಿ ಇರುವ ಪಿಂಚಣಿ ಹಣವನ್ನು ಬಿಡುಗಡೆ ಮಾಡಬೇಕು. ಗ್ರಾಮ ಆಡಳಿತಾಧಿಕಾರಿಗಳ ಮೂಲಕ ನಾಡ ಕಚೇರಿ ಹಂತದಲ್ಲೇ ತಾಂತ್ರಿಕ ದೋಷಗಳನ್ನು ಸರಳವಾಗಿ ಸರಿಪಡಿಸಲು ಗಡುವು ನೀಡಬೇಕು. ಅನಗತ್ಯವಾಗಿ ಪಿಂಚಣಿ ತಡೆಹಿಡಿದಿರುವ ಬಗ್ಗೆ ಕಂದಾಯ ಸಚಿವರು ಸದನದಲ್ಲಿ ಸ್ಪಷ್ಟನೆ ನೀಡಬೇಕು ಹಾಗಾಗಿ ಈ ವಿಷಯವನ್ನು ಸದನದಲ್ಲಿ ಕಂದಾಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

## ಸರ್ಕಾರದ ಉತ್ತರ

ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಒಟ್ಟು 83,12,536 ಪಿಂಚಣಿದಾರರಿದ್ದು, ಅರ್ಹತಾ ಮಾನದಂಡ ಹೊಂದದೆ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಕುರಿತು ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಯ ಪ್ರಕಾರ (Under Age, Income Limit, HRMS, IT Payee ಮತ್ತು APL) ಒಟ್ಟು **23,14,544** ಪಿಂಚಣಿದಾರರನ್ನು ಸಂದೇಹಾಸ್ಪದ ಫಲಾನುಭವಿಗಳೆಂದು ಗುರುತಿಸಲಾಗಿದ್ದು, ಈ ಪೈಕಿ ಇದುವರೆವಿಗೆ ದಾಖಲಾತಿಗಳನ್ನು ನೀಡಿ ಅರ್ಹರೆಂದು ಪರಿಗಣಿಸಿರುವ ಒಟ್ಟು **2,69,294** ಫಲಾನುಭವಿಗಳಿಗೆ ಈಗಾಗಲೇ ಮಾರ್ಚ್-2026 ರ ಮಾಹೆಯಿಂದ ಪಿಂಚಣಿ ಪಾವತಿಸಲು ಕ್ರಮವಹಿಸಲಾಗಿದೆ.

...2

ಮುಂದುವರೆದು, ಸಂದೇಹಾಸ್ಪದ ಫಲಾನುಭವಿಗಳ ಸಂಬಂಧ ಮಾರ್ಚ್-2026 ರ ಮಾಹೆಯಿಂದ ಸಂಯೋಜನೆ ಮೊಬೈಲ್ ಆಪ್ ಮುಖಾಂತರ ಗ್ರಾಮ ಆಡಳಿತಾಧಿಕಾರಿಗಳ ಮೂಲಕ ಭೌತಿಕ ಪರಿಶೀಲನೆ ನಡೆಸಿ (Not available in given Address, Not willing to provide documents and Income certificate not available) ಕುರಿತಂತೆ ಒಟ್ಟು 18,06,032 ಸಂದೇಹಾಸ್ಪದ ಫಲಾನುಭವಿಗಳು ಕಂಡುಬಂದಿದ್ದು, ಸದರಿ ಫಲಾನುಭವಿಗಳಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಜೂನ್-2026 ರ ಮಾಹೆಯಲ್ಲಿ ತಹಶೀಲ್ದಾರ್ ಮೂಲಕ ತಿಳುವಳಿಕೆಯನ್ನು ಜಾರಿ ಮಾಡಲಾಗಿದ್ದು ಹಾಗೂ 8ನೇ ಜುಲೈ ರಿಂದ 14 ನೇ ಜುಲೈ ಅವಧಿಯಲ್ಲಿ SMS ಮುಖಾಂತರ ಸಂದೇಶ ಕಳುಹಿಸಿ 30 ದಿನಗಳೊಳಗೆ ದಾಖಲಾತಿಗಳನ್ನು ಸಂಬಂಧಿತ ತಾಲ್ಲೂಕು ಕಛೇರಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ. ಸಮರ್ಪಕ ದಾಖಲೆಗಳನ್ನು ಸಲ್ಲಿಸಿದ ನಂತರ ಪಿಂಚಣಿ ಮಾನದಂಡಗಳನ್ವಯ ಪರಿಶೀಲಿಸಿ ತಹಶೀಲ್ದಾರರು ಅನುಮೋದನೆ ನೀಡುವ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಹಿಂಬಾಕಿ ಸಹಿತ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಮಧ್ಯೆ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 235 ಕೆಎಟಿ/ಎಸ್‌ಎಸ್‌ಪಿ 2026, ದಿನಾಂಕ: 18-8-2026 ರಂತೆ ಪರಿಶೀಲನೆಗೆ ಒಳಪಡಿಸಿರುವ ಸಂದೇಹಾಸ್ಪದ ಫಲಾನುಭವಿಗಳ ಪರಿಶೀಲನೆ ನಂತರ ರೂ. 32,000/- ಗಳಿಂದ ರೂ. 1,20,000/- ಒಳಗಿನ ವಾರ್ಷಿಕ ಆದಾಯ ಮಿತಿ ಹೊಂದಿರುವ ಅರ್ಹ ಫಲಾನುಭವಿಗಳ ಪಿಂಚಣಿಗಳನ್ನು ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದೆ. ಸದರಿ ಆದೇಶದಂತೆ ಅರ್ಹತಾ ಮಾನದಂಡ ಪೂರೈಸಿದಲ್ಲಿ, ಆದಾಯ ಮಿತಿ ಹೆಚ್ಚಿದ್ದ ಕಾರಣ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾದ ಫಲಾನುಭವಿಗಳ ಪಿಂಚಣಿ ಮುಂದುವರೆಸಲು ಕ್ರಮ ವಹಿಸಲಾಗುತ್ತಿದೆ.

ಕಡತ ಸಂಖ್ಯೆ:RD 263 KAT SSP 2026

(ಡಾ|| ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ